ಮೈಸೂರ ಗೆಜೆಟ್ಟು.

ನಂ. 50 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ್ಯ 1885.

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 12, ಸ್ಯ 1885.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ರಯವರು, ಸರ್ವೆ ಅನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕಸ್ ಆಫೀಸರ್‌ಗಳು, ಮೈಸೂರು ಸ್ಟೇಪ್ರೇಯಿಲ್‌ವೆ, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ.ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೋಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಅಕ್ಟುಗಳು ವರೆಗ್ಯುಲೇಷ್ಷಗಳು–ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 4ನೇ ಅಕ್ಟೋಬರ್ 1885.

ಕ್ಯಾಂಪ್ ನಂ. 1165—72.—ಸರ್ವೆರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತಿ ಬಾಬತು ಸಂವತ್ಸರದ ಸಾಲೀಯಾನಾ ಪರಾಜ್ ಆಯಾ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಮತ್ತು ಫಾರೆಸ್ಟು ಆಫೀಸರುಗಳಿಂದ ಇದರಡಿ ಕಂಡ ಸ್ಥಳಗಳಲ್ಲೂ ತಾರೀಖುಗಳಲ್ಲೂ ನಡಿಸಲ್ಪಡುವದು.

		ಸುಮಾರು ಟ್ಯಗಳು.
ಹುಣಸೂರು	14ನೇ ಡಿಶಂಬರ್ 1885.	500
ಬೆಂಗಳೂರು	19ನೇ ಡಿಟೋ	150

ಹಾಜಿನ ಷರತ್ತುಗಳು—ಸ್ಯ 1874ನೇ ಇಸವಿ ಡಿಶಂಬರ್ 5ನೇ ಮಕ್ತುಂ 48ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಲ್ಪಟ್ಟ ಪ್ರಕಾರ ಯಿರತಕ್ಕವು, ಮತ್ತು ಪರಾಜ್ ಕಾಲದಲ್ಲಿ ಪೋದಲ್ಪಡುವವು.

ತಾರೀಖು 21ನೇ ನವಂಬರ್ 1885.

ನಂ. 160.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೀಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀಮಾ

ಡಲ್ಪಟ್ಟಿರವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡೀಕಂಡ ಷರ್ತ್ತೀಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು, ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜ್ ಶುರುವಾಗಿ ಉಳಿಕೆಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತು ದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತೀಗಳಾಗಿ ವಿಂಗಡಿಸಲ್ಪಟ್ಟಿದ್ದರೆ ಜೆಪ್ಯೂಟಿ ಕಮ್ಮಿಷರ್ರರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಮಾಡಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಪಡಿಪ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತನ್ನ ಮುಖ್ತ್ಯಾರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡತಕ್ಕದ್ದು, ಇಲ್ಲದಿದ್ದಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖರೇಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜ್ ಮುಕ್ತಾಯ ಮಾಡಲ್ಪಡತಕ್ಕದ್ದು, ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯ್ದುಮಾಡ್ವುಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮಗಳು ಆತನ ಸುಪರ್ದಿ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು, ಜೆಪ್ಯೂಟಿ ಕಮ್ಮಿಷರ್ರರಿಂದ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು, ತಪಸೀಲ್ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಿಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜ್‌ನಿಂದ ನುಕ್ಸಾ ಪಟ್ಟುಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆರ್ ಪ್ರಕಾರಮಿಗೆ ಸದರೀ ಕ್ರಯವು ವಳಪಟ್ಟಿರುತ್ತೆ.

ತಿಪ್ಪುಪ್ಪ.	ತಾಲ್ಲೂಕಾ.	ಹೋಬಳಿ.	ಗ್ರಾಮದ ಹೆಸರು.	ಜೋತೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳಿಯ ಯಾ ಜಲ್ಲಿಜು.	ಸುಲಿಯೂನಾ ಸರಕಾರಿಗೆ ಕೊಡಬೇಕಾದ ಪೈಪೋಟಿ.	ಯಾವುದಾದರೂ ಗ್ರಾಮಗಳನ್ನು ಹರಾಜ್ ಕರಾಜ್ ಮಾಡಿದ್ದಲ್ಲಿ ಅಂಥಾ ಸರಕಾರ ಬಾಕೀ ಕಂದಾಯದ ಬಾಕಿ.	ಹರಾಜು ತಾರೀಖು ಮೈರೆ.
ಕೋಟಾರ	ಚಿಕ್ಕನಾಯಕನಹಳ್ಳಿ	ಗೆಜ್ಜೆಗೆರೆ	ಜೋಡಿ ಕಾಚಿಪಲ್ಲಿ	ಲಕ್ಷ್ಮಣರಾವ್	ಖಂ. ಕೂ. ಪ. ಖುಷ್ಕೀ 51 11 14½ ತರೀ 19 11 1 71 2 15½	ರೂ. ಆ. ಪೈ. 600 0 0 0	ರೂ. ಆ. ಪೈ. ಜೋಡಿ ದೇವಿಲ್ ಸ್ಟಾಪೇಟಿ 179 0 0 ಲೋಕಲ್ ಫೀವ್ 37 8 0 216 8 0	ರೂ. ಆ. ಪೈ. 333 0 0	ಜೋಡಿ ಕಾಚಿಪಲ್ಲಿಯಲ್ಲಿ ಅಮಲ್ದರ್ ರೂಬರೂ, 1886ನೇ ಇಸವಿ ಜನವರೀ ತಾರೀಖು 5ರಲ್ಲು.

ತಾರೀಖು 25ನೇ ನವೆಂಬರ್ 1885.

ನಂ. 162.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀಕಂಪ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮೂಹಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮವು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ, ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡ ದರಖಾಸ್ತುದಾರನಿಗೆ ಹರಾಜೆ ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತೀಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡಿಪ್ಯೂಟಿ ಕಮ್ಮಿಷ್ನರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜೆ ಕಾಲದಲ್ಲಿ ಕ್ರಯದ ಮೊಬಲಗ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ಪೈಕಿ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರ್ನಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಪಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ವ ಇತರ ಖಿರ್ದುಗಳು ದೇಶೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಪಾವರ್ ಮಾಡಿದರೆ, ಹರಾಜೆ ಮುವ್ಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಪಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜೆ ಕಾಯಮಾಗ್ದುದಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು; ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟುಂತೆ ಎಣಿಸುವ ಜನಗಳು, ಹರಾಜೆ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂಥಾ ಅಪ್ಪೀಲ್‌ನಲ್ಲಿ ಆಗುವ ಅಬೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ತಿಪ್ಪನಹಳ್ಳಿ, ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಪುಟ್ಟುವಳೀ ಯಾ ಬೇರೀಜು.	ಸಾಲೀಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೊ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜ್ ತಾರೀಖು ವಗೈರೆ.
				ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಅ. ಪೈ.	
ಕೋಲಾರ. ಚಿಂತಾಮಣಿ ತಾಲ್ಲೂಕು.	ಜಂಗಮಕೋಟೆ ಹೋಬಳಿ.	ಕಾಯಂಗುತ್ತಾ ಅಂಗತಟ್ಟೆ	ಮಹದೇವರಾವ್	55 0 0	305 0 0	305 0 0	352 15 1	ಇಷ್ಟನ್ನು ತಾ|| ಫೆಬ್ರವರಿ ಮಾಹೆ ರೂಬರೂ, 1886ನೇ ಇಸವಿ ಜನವರೀ ತಾರೀಖು 8ರಲ್ಲಿ.
		ಕಾಯಂಗುತ್ತಾ ವಾಮಗಲ್ಲು	ಭೀಮಾಚಾರ	21 0 0	175 0 0	175 0 0	996 12 3	ಡಿಪೋ

ತಾರೀಖು 23ನೇ ನವಂಬರ್ 1885.

ನಂ. 161.—ಇದರಿಂದ ಸರ್ವರ ತಿಳುವಳಿಕೆ ಬ್ಗೈ ಪ್ರಕಟಪಡಿಸುವದೇನಂದರೆ, ಸ್ ಈ 1885ನೇ ಇಸವಿ ಆಗಸ್ಟ್ 14ನೇ ಮಲ್ಕುಂ 104ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ನಮೂದಾದ ಮೈಸೂರು ಡಿಸ್ಟ್ರಿಕ್ಟ್ ಹಂಗಲ, ಮದ್ದೂರು ಡಿಪೋಗಳಲ್ಲಿನ ಮರಗಳ ಪರಾಜ್ ತ ತ್ಕಾಲಕ್ಕೆ ಮೋಕೂಫ್ ಮಾಡಲ್ಪಟ್ಟಿರುತ್ತೆ.

ತಾರೀಖು 22ನೇ ನವಂಬರ್ 1885.

ನಂ. 165.—ಸ್ ಈ 1879ನೇ ಇಸವಿಯ ಜನರಲ್ ಸ್ಟ್ಯಾಂಪ್ ಆಕ್ಟ್ 8ನೇ ಸೆಕ್ಷನ್ ಅನುಸಾರ ಶ್ರೀಮನ್ ಮಹಾರಾಜಾ ಸರ್ಕಾರದವರು, ಈ ತಾರೀಖಿಗೆ ಮುಂಚಿತವಾಗಿ ದಸ್ತಗಳು ವ ಚಮಡಿಗಳನ್ನು ಕ್ರಯಕ್ಕೆ ಪಡಕೊಂಡವರಿಂದ ಅವ್ಯತಮಹಲ್ ಇಲಾಖೆಗೆ ಬರೆದು ಕೊಡಲ್ಪಟ್ಟ ಮುಚ್ಚಲಿಕೆಗಳನ್ನು ಸ್ಟ್ಯಾಂಪು ಡ್ಯೂಟಿ ತೆರುವದರ ದೆಕೆಯಿಂದ ವಿನಾಯಿತಿರುತ್ತಾರೆ.

ವೊಕ್ಕಾಂ ಮೈಸೂರು, ತಾರೀಖು 25ನೇ ನವಂಬರ್ 1885.

ನಂ. 1492.—ಲೇಟ್ ಟೀಫ್ ಕಮ್ಮಿಷನರವರ ಸೆಕ್ರಿಟೇರಿಯವರಿಂದ ಸಾದರ್ಪಡಿಸಲ್ಪಟ್ಟ 1879ನೇ ಇಸವಿ ಏಪ್ರಿಲ್ 15ನೇ ಮಲ್ಕುಂ 16ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅಡಗಿರತಕ್ಕ ರೂಲ್ಸ್‌ಗಳನ್ನು ರದ್ದುಮಾಡಿ, ನಗರ ಮಲ್ನಾಡು ತಾಲ್ಲೂಕುಗಳಲ್ಲಿನ ಕಾನುಗಳ ಹಿಡುವಳಿದಾರರ ಹಕ್ಕುಗಳು ಕುರಿತ ಇದರಡಿ ಕಂಡ ರೂಲ್ಸ್‌ಗಳು ಅದಕ್ಕೆ ಸಂಬಂಧಪಟ್ಟ ದರೋಬಸ್ತರ ತಿಳುವಳಿಕೆ ಮತ್ತು ನಡವಳಿಕೆ ಬ್ಗೈ ಫಾಯಿಷ್ಮಾಡಲ್ಪಡುತ್ತೆ.

ರೂಲ್ 1.—ಎಂದು ಕಾನಿನ ಹಿಡುವಳಿದಾರನು, ಆಬ್‌ಕಾರಿ ರೂಲ್‌ಸಿಗೆ ವಳಪಟ್ಟು ಕೀಂದಿ ಗಿಡಗಳಿಗೆ ಕೀಂದಿ ಕಟ್ಟುವದಕ್ಕೂ ಮೆಣಸು ಸಾಗುವಳಿ ಮಾಡುವದಕ್ಕೂ ಮತ್ತು ಗೋಂದು ಜೇನು ಮುಂತಾದ ಜಂಗಲಿ ಫಸಲುಗಳನ್ನು ಜಮಾಯಿಸುವದಕ್ಕೂ ಸಹ ಹಕ್ಕು ವುಂಟಾಗಿರತಕ್ಕದ್ದು. ಕಾನಿಗೇ ವುಪಯೋಗಿಸತಕ್ಕ ಸೊಪ್ಪನ್ನು ಜಮಾಯಿಸಬಹುದು, ಮತ್ತು ಮೆಣಸಿನ ಬಳ್ಳಿಯ ಬೆಳವಿಗೆ ಗೋಸ್ತರ ಕೇವಲ ಜಾರಾದಪ್ಪು ಮಟ್ಟಿಗೆ ಕೆಳ ರಂಜಗಳನ್ನೂ ಮೇಲ್ ರಂಜೆಗಳನ್ನೂ ಕತ್ತರಿಸಬಹುದು.

ರೂಲ್ 2.—ಕಾನಿನ ಹಿಡುವಳಿದಾರನು ಕಾನಿಗೇ ವುಪಯೋಗಿಸತಕ್ಕ ಸೊಪ್ಪುಗೋಸ್ತರ ಕಾನಿನಲ್ಲಿ ಬೆಳೆಯುವ ಮನ್ನಾ ಜಾತಿ ಅಲ್ಲದ ಮರಗಳನ್ನು ಕತರಾಯಿಸುವ ಬ್ಗೈ ಹಕ್ಕು ವುಂಟಾಗಿರುತ್ತಾನೆ.

ರೂಲ್ 3.—ಕಾಣ ಹಿಡುವಳಿದಾರನ ಮನೆಯಿಂದ 50 ಗಜದ ಫಾಸಲೆ ವಳಗಾಗಿ ಕಾಣ ವಿಸ್ತರಿಸಿ ಇದ್ದರೆ ಅತನು ತನ್ನ ಮನೆಯ ಯಾವ ದಿಕ್ಕಿನಲ್ಲಾಗಲಿ 50 ಗಜದ ಫಾಸಲೆ ವಳಗಾಗಿ ಬೆಳೆಯುವ ಮನ್ನಾ ಜಾತಿ ಅಲ್ಲದ ಯಾವದಾದರೂ ಮರಗಳನ್ನು ಕತರಾಯಿಸುವದಕ್ಕೂ ಯಾ ಸೊಪ್ಪುಗೋಸ್ತರ ಯಾವದಾದರೂ ಮನ್ನಾ ಜಾತಿ ಮರಗಳನ್ನು ಕಡಿಯುವದಕ್ಕೂ ಹಕ್ಕು ವುಂಟಾಗಿರತಕ್ಕದ್ದು. ಸದರೀ ಫಾಸಲೆಗಳೊಳಗೆ ಆವನು ಯಾವ ಮರಗಳನ್ನಾಗಲಿ ಬೆಳೆಸುವದಕ್ಕೂ ಯಾ ಯಾವ ಸಾಗುವಳಿಯನ್ನಾದರೂ ನಡಿಸುವದಕ್ಕೂ ಸರ್ವ ಸ್ವತಂತ್ರನಾಗಿರತಕ್ಕದ್ದು. ಈ ರೂಲ್ ಅನುಸಾರಿಸಿ ಕತರಾಯಿಸಲ್ಪಟ್ಟ ಸೊಪ್ಪು ಕಾನಿನಲ್ಲೇ ವುಪಯೋಗಿಸಲ್ಪಡತಕ್ಕದ್ದು.

ರೂಲ್ 4.—ಮೇಲ್ಕಂಡ ರೂಲ್‌ಗಳಿಂದ ಅಪ್ಪಣೆ ಕೊಡಲ್ಪಟ್ಟ ಸಂಗತಿಗಳಲ್ಲಿ ವಿನಾ, ಕಾನಿನ ಹಿಡುವಳೀದಾರನು ಸದರೀ ಕಾನಿನಲ್ಲಿ ಬೆಳೆಯುವ ಮರಗಳ ವಿಷಯದಲ್ಲಿ—

(a) ಮನ್ನಾ ಜಾತಿ ಯಾ ಮನ್ನಾ ಜಾತಿಅಲ್ಲದ ಯಾವ ಮರಗಳನ್ನಾದರೂ ಕಡಿಯುವದಕ್ಕಾಗಲಿ ಊನುಪಡಿಸುವದಕ್ಕಾಗಲಿ,

(b) ಅಥವಾ ಯಾವ ಮನ್ನಾ ಜಾತಿ ಮರವನ್ನಾದರೂ "ಸೊಪ್ಪಿ" ಗೋಸ್ತರ ಯಾ ಅನ್ಯಥಾ ಊನುಪಡಿಸುವದಕ್ಕಾಗಲಿ ತೊಂದರೆ ಪಡಿಸುವದಕ್ಕಾಗಲಿ,

ಹಕ್ಕು ವುಂಟಾಗಿರುವದಿಲ್ಲವು.

ಈ ರೂಲ್ ಉಲ್ಲಂಘಿಸಿ ಸದರಿಯವನು ಯಾವ ಮರವನ್ನಾಗಲಿ ಕಡಿದರೂ ಯಾ ಊನುಪಡಿಸಿದರೂ, ಅಥವಾ "ಸೊಪ್ಪಿ"ಗೋಸ್ತರ ಯಾವ ಮನ್ನಾ ಜಾತಿ ಮರವನ್ನಾದರೂ ಕಡಿದರೂ ಯಾ ಅನ್ಯಥಾ ಊನಪಡಿಸಿದರೂ, ಕಾನಿನ ಹಿಡುವಳಿ ಪರತ್ತು ಉಲ್ಲಂಘಿಸಲ್ಪಟ್ಟಂತೆ ಎಣಿಸಲ್ಪಟ್ಟು ಕಾನು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದಲ್ಲದೆ ತಕಸೀರ್‌ದಾರನು ಫಾರೆಸ್ಟ್ ರೂಲ್ಸಿನ ಉಲ್ಲಂಘನೆ ಬ್ಗಾಗಿ ಶಿಕ್ಷಿಸಲ್ಪಡುವದಕ್ಕೂ ಗುರಿಯಾಗತಕ್ಕದ್ದು.

ರೂಲ್ 5.—ಕಾನಿನ ಹಿಡುವಳಿದಾರನು, ಕಾನಿನಲ್ಲಿ ಕಾಫಿ ಸಾಗುವಳಿ ಮಾಡುವದಕ್ಕೆ ಹಕ್ಕು ಉಂಟಾಗಿರುವದಿಲ್ಲವು, ಮತ್ತು, ಹಾಗೆ ಕಾಫಿ ಸಾಗುವಳಿ ಮಾಡುವದರ ದೆಕೆಯಿಂದ ಕಾನಿನ ಹಿಡುವಳಿ ಪರತ್ತುಗಳು ಉಲ್ಲಂಘಿಸಲ್ಪಟ್ಟರೆ ಕಾನು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

ಒ ಂ

ತಾರೀಖು 7ನೇ ಡಿಸಂಬರ್ 1885.

ನಂ. 167.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಗತ ಸೆಪ್ಟಂಬರ್ 3ನೇ ತಾರೀಖಿನಲ್ಲಿ ಹರಾಜಾಗಿ ಕ್ರಯದಾರನಿಂದ ವೊಬಲಗು ಪಾವತೀ ಮಾಡಲ್ಪಡದೇ ಯಿರುವ ಇದರಡೀಕಂಡ ಜೋಡಿ ಗ್ರಾಮವು ಸದರೀ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾ ಕರವಾಗಿ ಇದಕ್ಕೆ ಲಗತ್ತಾದ ತಖ್ತೆಯಲ್ಲಿ ನಮೂದಿಸಿದ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ಮರಳಿ ವಿಕ್ರಯಿಸಲ್ಪಡುವದು, ಮತ್ತು ಸದರೀ ತಾರೀಖಿನಲ್ಲಿ ಬೆಳ್ಗ್ಯೆ 11 ಘಂಟೆಗೆ ಹರಾಜು ಷುರುವಾಗಿ, ವುಳಿಯಾವದು ಇಲ್ಲದೆ ಗ್ರಾಮವು ಜಡ ದರಖಾಸ್ತುದಾರನಿಗೆ ಹರಾಜಿನಲ್ಲಿ ನಿಲ್ಲುವದು.

2. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ವೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ, ಮತ್ತು ಬಾಕೀ ವೊಬಲಗನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡತಕ್ಕದ್ದು. ತಪ್ಪಿದರೆ ಗ್ರಾಮವು ಸದರೀ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವದಲ್ಲದೆ ಡಿಪಾಜಿಟ್ ವೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

3. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯೂ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬುವದನ್ನ ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥಾವರ ದರಖಾಸ್ತು ತಿರಸ್ಕರಿಸಲ್ಪಡುವದು.

4. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಖಾಯಮ್ಮಾದ್ದಾಗಿರುವದಿಲ್ಲವು.

5. ಕ್ರಯದಾರರು ಕ್ರಯದ ವೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವೀಜ್ ಆಫಿಸರಿಂದ ರುಜು ವೊಪರ್ ಮಾಡೋಣವಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು; ತಪೇಲ್‌ನಲ್ಲಾಗಲಿ ಅಂದಾಜಾ ಬೀಜವೇ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

6. ಪರಂತು, ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆಯ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ತಿಪ್ಪಗ್ಗು.	ತಾಲ್ಲೂಕು.	ಹೊಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವಳೀ ಯಾಗಬೇಕಾದ ಕ್ವಿಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಲ್ಲಿ ಕೊಂಡ ಖರೀದಿ ಕ್ವಿಟ್‌ರೆಂಟ್.	ಹಿಂದಿನ ಹರಾಜಿನ ಖರೀದಿ	ಹರಾಜು ಕಾಯಿದೆ ಪ್ರಕಾರ ಹರಾಜು ಹಾಸನ ಸಬ್ ಡಿವೀಜ್.
					ಎಕರೆ. ಗುಂಟೆ.	ರೂ. ಆ.	ರೂ. ಆ.	ರೂ. ಆ.	
ಕಣಕೂರು.	ಬೇಲೂರು.	ಅರೇಹಳ್ಳಿ.	ಜೋಡಿ ಹುಲಕೋಡು.	ಬಂದಪ್ಪಯ್ಯ ಇತರ 13 ಮಂದಿ.	288 14	452 8	153 12	490 0	ಸ್ಯ 1885ನೇ ಇಸವಿ ತಾರೀಖು ರಲ್ಲು ಬೇಲೂರು ತಾಲ್ಲೂಕು ಕಛೇರಿಯಲ್ಲಿ ಸದರೀ ತಾಲ್ಲೂಕು ಅಮಲ್‌ದಾರರಿಂದ.

ಬವೋಜಿಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.